ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583 105
VIJAYANAGARA SRI KRISHNADEVARAYA UNIVERSITY
"Jnana Sagara" Campus, Vinayaka Nagara, Cantonment, Ballari - 583 105
ಕುಲಸಚಿವರು
Registrar
e-mail: registrarps@vskub.ac.in
website: www.vskub.ac.in

ಸಂಖ್ಯೆ: ವಿಶ್ರೀಕೃವಿಬ/ಆಡಳಿತ-ಸಾಮಾನ್ಯ/ರಾಸೇಯೋ/2024-25/ 2871/2 ದಿನಾಂಕ: 12.02.2025

# ಸುತ್ತೋಲೆ

ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10.02.2025 ರಂತೆ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ರಾಸೇಯೋ ಘಟಕಗಳನ್ನು ಹೊಂದಿರುವ ಸ್ನಾತಕೋತ್ತರ ಕೇಂದ್ರ/ಕಾಲೇಜಿನ ನಿರ್ದೇಶಕರು/ಪ್ರಾಂಶುಪಾಲರು/ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಗಳಿಗೆ ತಿಳಿಯ ಪಡಿಸುವುದೇನೆಂದರೆ 2024-25ನೇ ಸಾಲಿನಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶದ ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ **05 ಬಳ್ಳಾರಿ ಜಿಲ್ಲಾ ಮಟ್ಟದಲ್ಲಿ 07ದಿನಗಳ ವಿಶೇಷ ಶಿಬಿರ ಮತ್ತು 05 ವಿಜಯನಗರ ಜಿಲ್ಲಾ ಮಟ್ಟದಲ್ಲಿ 07 ದಿನಗಳ ವಿಶೇಷ ಶಿಬಿರ** ಆಯೋಜಿಸಲು ಉದ್ದೇಶಿಸಲಾಗಿದೆ. ಜಿಲ್ಲಾ ಮಟ್ಟದ ಶಿಬಿರ ಆಯೋಜಿಸಲು ಕನಿಷ್ಠ 100 ಸೇವಕ ಸೇವಕಿಯರು ಅಥವಾ 200 ಸೇವಕ ಸೇವಕಿಯರನ್ನೊಳಗೊಂಡು 15ನೇ ಮಾರ್ಚ 2025ರೊಳಗಾಗಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಶಿಬಿರ ಆಯೋಜಿಸಲು ಅರ್ಜಿ ಆಹ್ವಾನಿಸಲಾಗಿದೆ.

**ನಿಬಂಧನೆಗಳು:**

01. ಎರಡು ಎನ್.ಎಸ್.ಎಸ್.ಘಟಕಗಳಿರುವ ಕಾಲೇಜುಗಳಿಂದ ಆಯೋಜನಾ ಸಾಮರ್ಥ್ಯಕ್ಕೆ ಅನುಗುಣವಾಗಿ 100 / 200 ಸಂಖ್ಯಾಬಲದ ಜಿಲ್ಲಾ ಮಟ್ಟದ ಶಿಬಿರದ ಆಯೋಜನೆಗೆ ಪ್ರಸ್ತಾವನೆ ಸಲ್ಲಿಸುವುದು.
02. ಜಿಲ್ಲಾ ಮಟ್ಟದ ಎನ್.ಎಸ್.ಎಸ್. ವಿಶೇಷ ಶಿಬಿರಕ್ಕೆ ಆತಿಥೇಯ ಕಾಲೇಜಿನಿಂದ ಶೇ.50ರಷ್ಟು ಸ್ವಯಂ ಸೇವಕರು ಮತ್ತು ಉಳಿದಂತೆ ಜಿಲ್ಲಾ ಮಟ್ಟದಲ್ಲಿನ ಪ್ರತಿ ಕಾಲೇಜುಗಳಿಂದ ಪುರುಷ ಮತ್ತು ಮಹಿಳಾ ಸ್ವಯಂ ಸೇವಕರನ್ನು ಸಮಾನಾಂತರವಾಗಿ ಆಹ್ವಾನಿಸಿ ಶಿಬಿರವನ್ನು ಆಯೋಜಿಸುವುದು.
03. ಪ್ರತಿ 50 ಸ್ವಯಂ ಸೇವಕರಿಗೆ ಓರ್ವ ಕಾರ್ಯಕ್ರಮಾಧಿಕಾರಿಯನ್ನು ಆಹ್ವಾನಿಸುವುದು.
04. 100 ಸಂಖ್ಯಾಬಲದ ಒಂದು ಶಿಬಿರಕ್ಕೆ ಕನಿಷ್ಠ ಒಬ್ಬರು ಮಹಿಳಾ ಕಾರ್ಯಕ್ರಮಾಧಿಕಾರಿಗಳನ್ನು ನಿಯೋಜಿಸಿಕೊಳ್ಳುವುದು ಒಂದು ವೇಳೆ ಮಹಿಳಾ ಕಾರ್ಯಕ್ರಮಾಧಿಕಾರಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಆತಿಥೇಯ ಕಾಲೇಜಿನಲ್ಲಿ ಸೇವೆ ಸಲ್ಲಿಸುವ ಉಪನ್ಯಾಸಕ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳುವುದು.
05. ಜಿಲ್ಲಾ ಮಟ್ಟದ ಎನ್.ಎಸ್.ಎಸ್. ವಿಶೇಷ ಶಿಬಿರಕ್ಕೆ ಸರ್ಕಾರವು ನಿಯೋಜಿಸಿರುವ ಅನುದಾನದ ಮಿತಿಯಲ್ಲಿಯೇ ಶಿಬಿರವನ್ನು ಆಯೋಜಿಸಲಾಗುವುದು.
06. ಈ ಹಿಂದೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಮತ್ತು ವಿಶೇಷ ಶಿಬಿರಗಳಲ್ಲಿ ಭಾಗವಹಿಸದೇ ಇರುವ ಸ್ವಯಂ ಸೇವಕ-ಸ್ವಯಂ ಸೇವಕಿರನ್ನು ಆಯಾ ಕಾಲೇಜಿನ ಪ್ರಾಂಶುಪಾಲರ ದೃಢೀಕರಣದ ಪ್ರತಿಯೊಂದಿಗೆ ಆಹ್ವಾನಿಸಿ ಶಿಬಿರ ಆಯೋಜಿಸಲಾಗುವುದು.
07. ಶಿಬಿರ ಆಯೋಜಿಸಿದ ಒಂದು ತಿಂಗಳೊಳಗಾಗಿ ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ ಬಳ್ಳಾರಿ ಇವರಿಗೆ ಬಿಲ್‌ಗಳನ್ನು ಸಲ್ಲಿಸಲಾಗುವುದು ಮತ್ತು ವರದಿಯನ್ನು ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾ.ಸೇ.ಯೋ. ಕೋಶ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇವರಿಗೆ ಸಲ್ಲಿಸಲಾಗುವುದು.
08. ಖರ್ಚು-ವೆಚ್ಚಗಳು ಸರ್ಕಾರದ ಕಾಲ ಕಾಲಕ್ಕೆ ಅನ್ವಯವಾಗುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಮು.ತಿ.ನೋ.

ಮೇಲಿನ ಎಂಟು ನಿಬಂಧನೆಗಳನ್ನು ಅನುಸರಿಸಿ ಈ ಕೆಳಕಂಡ ಕೋಷ್ಟಕದ ಅನುದಾನ ಶೀರ್ಷಿಕೆಗಳಿಗೆ ಅನುಸಾರವಾಗಿ 7 ದಿನಗಳ ಜಿಲ್ಲಾ ಮಟ್ಟದ ವಿಶೇಷ ಶಿಬಿರ ಆಯೋಜಿಸಲು ಅನುದಾನ ಬಿಡುಗಡೆ ಮಾಡಲಾಗುವುದು.

| ಕ್ರ ಸಂ | ಜಿಲ್ಲಾ ಮಟ್ಟದ ವಿಶೇಷ ಶಿಬಿರದ ಶೀರ್ಷಿಕೆವಾರು ವಿವರ | ಪ್ರತಿ 100 ಸ್ವಯಂ ಸೇವಕ–ಸೇವಕಿಯರಿಗೆ | ಪ್ರತಿ 200 ಸ್ವಯಂ ಸೇವಕ–ಸೇವಕಿಯರಿಗೆ |
|---|---|---|---|
| 01 | ಊಟೋಪಚಾರಗಳ ವೆಚ್ಚ: | 54,600/- | 01,09,200/- |
| 02 | ಸಲಕರಣೆ ಖರೀದಿ ಮತ್ತು ರಿಪೇರಿ | 2,200/- | 4,400/- |
| 03 | ಪ್ರಯಾಣ ವೆಚ್ಚ | 4,200/- | 8,400/- |
| 04 | ಸಾದಿಲ್ವಾರು ವೆಚ್ಚ | 9,000/- | 18,000/- |
| ಶಿಬಿರದ ಆಯೋಜನೆಗೆ ಅಗತ್ಯವಿರುವ ಒಟ್ಟು ಅಂದಾಜು ಮೊತ್ತ ರೂ. | | **70,000/-** | **1,40,000/-** |

ಆಸಕ್ತ ಕಾಲೇಜಿನ ರಾಸೇಯೋ ಕಾರ್ಯಕ್ರಮಾಧಿಕಾರಿಗಳು ಪ್ರಾಂಶುಪಾಲರ ಸಹಿಯೊಂದಿಗೆ ಲಗತ್ತಿಸಿರುವ ನಮೂನೆಯಂತೆ ದಿನಾಂಕ: 15.03.2025ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

12/2/25

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಶಾಖೆ, ವಿಶ್ರೀಕೃವಿವಿ ಬಳ್ಳಾರಿ. ಮಾಹಿತಿಗಾಗಿ
2. ಡಾ. ಪ್ರತಾಪ್ ಲಿಂಗಯ್ಯ, ರಾಜ್ಯ ಎನ್.ಎಸ್.ಎಸ್.ಅಧಿಕಾರಿಗಳು, ರಾಜ್ಯ ಎನ್.ಎಸ್.ಎಸ್.ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು. ಮಾಹಿತಿಗಾಗಿ
3. ಪ್ರಾಂತೀಯ ನಿರ್ದೇಶಕರು, ಎನ್.ಎಸ್.ಎಸ್.ಪ್ರಾಂತೀಯ ಕಚೇರಿ, ಭಾರತ ಸಕಾರ, ಬೆಂಗಳೂರು. ಮಾಹಿತಿಗಾಗಿ
4. ಕಾರ್ಯಕ್ರಮ ಸಂಯೋಜನಾಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನೆ ಕೋಶ, ವಿಶ್ರೀಕೃವಿವಿ ಬಳ್ಳಾರಿ.
5. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ವ್ಯಾಪ್ತಿಯ ರಾ.ಸೇ.ಯೋ. ಘಟಕಗಳ ಕಾರ್ಯಕ್ರಮಾಧಿಕಾರಿಗಳ ಮಾಹಿತಿಗಾಗಿ
6. ಕಛೇರಿ ಪ್ರತಿ

## ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ
## ರಾಷ್ಟ್ರೀಯ ಸೇವಾ ಯೋಜನೆ
### ಜಿಲ್ಲಾ ಮಟ್ಟದ ವಿಶೇಷ ಶಿಬಿರ 2024-25
### ಅರ್ಜಿ ನಮೂನೆ

| | | | |
|---|---|---|---|
| 1. | ಕಾಲೇಜಿನ ಹೆಸರು | : | |
| 2. | ಪ್ರಾಂಶುಪಾಲರ ಹೆಸರು ಕಾಲೇಜಿನ ವಿಳಾಸ ದೂರವಾಣಿ ಮತ್ತು ಇ-ಮೇಲ್ ನೊಂದಿಗೆ | : | |
| 3. | ರಾ.ಸೇ. ಯೋಜನೆ ತಮ್ಮ ಕಾಲೇಜಿನಲ್ಲಿ ಪ್ರಾರಂಭವಾದ ವರ್ಷ | : | |
| 4. | ತಮ್ಮ ಕಾಲೇಜಿನ ಪ್ರಸ್ತುತ ರಾ.ಸೇ.ಯೋ ಘಟಕಗಳ ಸಂಖ್ಯೆ | : | |
| 5. | ರಾ.ಸೇ.ಯೋಜನೆಗೆ ನೋಂದಣಿ ಮಾಡಿಸಿರುವ ಸ್ವಯಂ ಸೇವಕ-ಸೇವಕಿಯರ ಸಂಖ್ಯೆ (ಘಟಕವಾರು ವಿವರ ನೀಡುವುದು) | : | ಗಂ \| ಹೆ \| ಇ \| ಒಟ್ಟು |
| 6. | ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ | : | |
| 7. | ETI ತರಬೇತಿ ಪಡೆದ ರಾ.ಸೇ.ಯೋ ಅಧಿಕಾರಿಗಳ ಹೆಸರು (ತರಬೇತಿ ಪ್ರಮಾಣ ಪತ್ರ ಲಗತ್ತಿಸುವುದು) | : | |
| 8. | ಪ್ರಸ್ತುತ ವರ್ಷದಲ್ಲಿ ಜಿಲ್ಲಾ ಮಟ್ಟದ ವಿಶೇಷ ಶಿಬಿರಗಳನ್ನು ತಮ್ಮ ಕಾಲೇಜಿನಿಂದ ಆಯೋಜಿಸಲಾಗಿದೆಯೇ? (ಆಯೋಜಿಸಿದ್ದರೆ ವಿವರ ಲಗತ್ತಿಸುವುದು). | : | |
| 9. | ಜಿಲ್ಲಾ ಮಟ್ಟದ ಶಿಬಿರ ಆಯೋಜಿಸಲು ತಾವು ಕೋರಿರುವ ಸಂಖ್ಯಾಬಲ (100 ಸಂಖ್ಯಾಬಲದ ಶಿಬಿರ/200 ಸಂಖ್ಯಾ ಬಲದ ಶಿಬಿರ) | : | |
| 10. | ತಾವು ಕೋರಿರುವ ಸಂಖ್ಯಾಬಲಕ್ಕೆ ಅನುಗುಣವಾಗಿ ಜಿಲ್ಲಾ ಮಟ್ಟವನ್ನು ಆಯೋಜಿಸಲು ತಮ್ಮ ಕಾಲೇಜು ಅಥವಾ ಶಿಬಿರ ನಡೆಸುವ ಸ್ಥಳದಲ್ಲಿ ಅಗತ್ಯ ಮೂಲ ಸೌಕರ್ಯಗಳು ಇವೆಯೇ?<br>(ಈ ಕುರಿತು ಪ್ರತ್ಯೇಕ ಹಾಳೆಯಲ್ಲಿ ಶಿಬಿರ ನಡೆಸುವ ಕುರಿತ ಪ್ರಸ್ತಾವನೆ ವಿವರವನ್ನು ಪ್ರಾಂಶುಪಾಲರ ದೃಢೀಕೃತ ಸಹಿಯೊಂದಿಗೆ ಲಗತ್ತಿಸುವುದು) | : | |
| 11. | ರಾ.ಸೇ.ಯೋ ಮಹಿಳಾ ಕಾರ್ಯಕ್ರಮ ಸಂಯೋಜನಾಧಿಕಾರಿಗಳ ನೇಮಕವಾಗಿದೆಯೇ? | : | |
| 12. | ರಾ.ಸೇ.ಯೋಜನೆಯಡಿ ತಮ್ಮ ಕಾಲೇಜಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಮ್ಮಿಕೊಂಡಿರುವ ಸೇವಾ ಚಟುವಟಿಕೆಗಳ ವಿವರ | : | ಲಗತಿಸಿದೆ/ ಲಗತ್ತಿಸಿಲ್ಲ |

| | | | |
|---|---|---|---|
| 13. | My Bharath Portal ನಲ್ಲಿ ನೋಂದಾಯಿಸಿರುವ ತಮ್ಮ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ | : | ಗಂ / ಹೆ / ಇ / ಒಟ್ಟು |
| 14. | ಅನುದಾನ ಬಿಡುಗಡೆಗೆ ಬ್ಯಾಂಕ್ ವಿವರಗಳನ್ನು ಒದಗಿಸುವುದು (ಬ್ಯಾಂಕ್ ಪಾಸ್‌ಬುಕ್ ಪ್ರತಿಯನ್ನು ಲಗತ್ತಿಸುವುದು) | 1 | ಖಾತೆದಾರರ ಹೆಸರು: |
| | | 2 | ಬ್ಯಾಂಕಿನ ಹೆಸರು: |
| | | 3 | ಬ್ರಾಂಚ್ ಹೆಸರು: |
| | | 4 | ಉಳಿತಾಯ ಖಾತೆ ಸಂಖ್ಯೆ: |
| | | 5 | ಐ.ಎಫ್.ಎಸ್.ಸಿ ಸಂಕೇತ: |

**ನಿಬಂಧನೆಗಳು:**

01. ಎರಡು ಎನ್.ಎಸ್.ಎಸ್.ಘಟಕಗಳಿರುವ ಕಾಲೇಜುಗಳಿಂದ ಆಯೋಜನಾ ಸಾಮರ್ಥ್ಯಕ್ಕೆ ಅನುಗುಣವಾಗಿ 100 / 200 ಸಂಖ್ಯಾಬಲದ ಜಿಲ್ಲಾ ಮಟ್ಟದ ಶಿಬಿರದ ಆಯೋಜನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ
02. ಜಿಲ್ಲಾ ಮಟ್ಟದ ಎನ್.ಎಸ್.ಎಸ್. ವಿಶೇಷ ಶಿಬಿರಕ್ಕೆ ಆತಿಥೇಯ ಕಾಲೇಜಿನಿಂದ ಶೇ.50ರಷ್ಟು ಸ್ವಯಂ ಸೇವಕರು ಮತ್ತು ಉಳಿದಂತೆ ಜಿಲ್ಲಾ ಮಟ್ಟದಲ್ಲಿನ ಪ್ರತಿ ಕಾಲೇಜುಗಳಿಂದ ಪುರುಷ ಮತ್ತು ಮಹಿಳಾ ಸ್ವಯಂ ಸೇವಕರನ್ನು ಸಮಾನಾಂತರವಾಗಿ ಆಹ್ವಾನಿಸಿ ಶಿಬಿರವನ್ನು ಆಯೋಜಿಸಲಾಗುತ್ತದೆ.
03. ಪ್ರತಿ 50 ಸ್ವಯಂ ಸೇವಕರಿಗೆ ಓರ್ವ ಕಾರ್ಯಕ್ರಮಾಧಿಕಾರಿಯನ್ನು ಆಹ್ವಾನಿಸಲಾಗುತ್ತದೆ.
04. 100 ಸಂಖ್ಯಾಬಲದ ಒಂದು ಶಿಬಿರಕ್ಕೆ ಕನಿಷ್ಟ ಒಬ್ಬರು ಮಹಿಳಾ ಕಾರ್ಯಕ್ರಮಾಧಿಕಾರಿಗಳನ್ನು ನಿಯೋಜಿಸಿಕೊಳ್ಳುವುದು. ಒಂದು ವೇಳೆ ಮಹಿಳಾ ಕಾರ್ಯಕ್ರಮಾಧಿಕಾರಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಆತಿಥೇಯ ಕಾಲೇಜಿನಲ್ಲಿ ಸೇವೆ ಸಲ್ಲಿಸುವ ಉಪನ್ಯಾಸಕ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲಾಗುವುದು.
05. ಜಿಲ್ಲಾ ಮಟ್ಟದ ಎನ್.ಎಸ್.ಎಸ್. ವಿಶೇಷ ಶಿಬಿರಕ್ಕೆ ಸರ್ಕಾರವು ನಿಯೋಜಿಸಿರುವ ಅನುದಾನದ ಮಿತಿಯಲ್ಲಿಯೇ ಶಿಬಿರವನ್ನು ಆಯೋಜಿಸಲಾಗುವುದು.
06. ಈ ಹಿಂದೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಮತ್ತು ವಿಶೇಷ ಶಿಬಿರಗಳಲ್ಲಿ ಭಾಗವಹಿಸದೇ ಇರುವ ಸ್ವಯಂ ಸೇವಕ-ಸ್ವಯಂ ಸೇವಕಿರನ್ನು ಆಯಾ ಕಾಲೇಜಿನ ಪ್ರಾಂಶುಪಾಲರ ದೃಢೀಕರಣದ ಪ್ರತಿಯೊಂದಿಗೆ ಆಹ್ವಾನಿಸಿ ಶಿಬಿರ ಆಯೋಜಿಸಲಾಗುವುದು.
07. ಶಿಬಿರ ಆಯೋಜಿಸಿದ ಒಂದು ತಿಂಗಳೊಳಗಾಗಿ ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ ಬಳ್ಳಾರಿ ಇವರಿಗೆ ಬಿಲ್‌ಗಳನ್ನು ಸಲ್ಲಿಸಲಾಗುವುದು ಮತ್ತು ವರದಿಯನ್ನು ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾ.ಸೇ.ಯೋ. ಕೋಶ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇವರಿಗೆ ಸಲ್ಲಿಸಲಾಗುವುದು.
08. ಖರ್ಚು-ವೆಚ್ಚಗಳು ಸರ್ಕಾರದ ಕಾಲ ಕಾಲಕ್ಕೆ ಅನ್ವಯವಾಗುವ ನಿಬಂಧನೆಗಳಿಗೆ ಒಳಪಟ್ಟಿರುವ ಕುರಿತು ಸಂಪೂರ್ಣ ಮಾಹಿತಿ ಇರುತ್ತದೆ.

## ದೃಢೀಕರಣ

ರಾಷ್ಟ್ರೀಯ ಸೇವಾ ಯೋಜನೆಯ ಬಳ್ಳಾರಿ/ವಿಜಯನಗರ ಜಿಲ್ಲಾ ಮಟ್ಟದ ವಿಶೇಷ ಶಿಬಿರ ಆಯೋಜನೆಗೆ ಮೇಲಿನ ನಿಬಂಧನೆಗಳ ಮಾಹಿತಿ ಇರುತ್ತದೆ ಮತ್ತು ಈ ನಿಬಂಧನೆಗಳಿಗೆ ಸಂಪೂರ್ಣ ಒಪ್ಪಿಗೆ ಇರುತ್ತದೆ. ಯಾವುದೇ ಲೆಕ್ಕಪತ್ರ ಆಕ್ಷೇಪಣೆ ಕುರಿತು ನಮ್ಮ ಕಾಲೇಜಿನದೇ ಸಂಪೂರ್ಣ ಹೊಣೆಗಾರಿಕೆ ಇರುತ್ತದೆ ಎಂಬುದನ್ನು ಒಪ್ಪಿ ಈ ಮೂಲಕ ಸಹಿ, ದಿನಾಂಕ ಮತ್ತು ಮೊಹರಿನೊಂದಿಗೆ ದೃಢಿಕರಿಸಿದೆ;

**ದಿನಾಂಕ:**

ಕಾರ್ಯಕ್ರಮಾಧಿಕಾರಿಗಳು
ರಾ.ಸೇ.ಯೋ ಘಟಕ ಸಂಖ್ಯೆ:

ಕಾರ್ಯಕ್ರಮಾಧಿಕಾರಿಗಳು
ರಾ.ಸೇ.ಯೋ ಘಟಕ ಸಂಖ್ಯೆ:

ನಿರ್ದೇಶಕರು/
ಪ್ರಾಂಶುಪಾಲರು